

ಈ ಮನುಷ್ಯ ತನ್ನ ಮನೆಯ ವಾಸ್ತುವಿಗೋ, ಅದೃಷ್ಟಕ್ಕೋ, ಐಶ್ವರ್ಯಕ್ಕೋ, ಸಂಪಿನಲ್ಲಿ ಜೊಂಡು ಕಟ್ಟದಿರಲೆಂದೋ ಅಥವಾ ಇನ್ನಾರೋ ಹೇಳಿದರೆಂದು ನಮ್ಮನ್ನು ಕೆರೆ, ನದಿ, ಹಳ್ಳದಿಂದ ಹಿಡಿದು ತಂದು ಹೀಗೆ ನೀರಿನ ತೊಟ್ಟಿಯಲ್ಲಿ ಎಸೆದು ಕೈತೊಳೆದುಕೊಳ್ಳುತ್ತಾನೆ. ನಮಗೂ ಒಂದು ಜೀವವಿದೆ, ನಮಗೂ ಬೇರೆ ಬೇರೆ ಆಹಾರದ ಅವಶ್ಯಕತೆ ಇದೆ, ನಮಗೂ ಭಾವನೆಗಳಿವೆ, ನಮಗೂ ಬಯಕೆಗಳಿವೆಯೆಂಬ ಸಣ್ಣ ಸೂಕ್ಷ್ಮತೆಯಾಗಲೀ ವಿಚಾರವಂತಿಕೆಯಾಗಲೀ ಈ ಮನುಷ್ಯ ಪ್ರಾಣಿಗೆ ಇಲ್ಲವೇ ಇಲ್ಲ.

ನನ್ನಂತೆ ಅದೆಷ್ಟೋ ಜೀವಗಳು ಅದೆಷ್ಟು ವರ್ಷಗಳಿಂದ ನೀರಿನ ತೊಟ್ಟಿಯಲ್ಲಿ ಪಾಚಿ ತಿಂದೋ, ಇಲ್ಲಾ ಮನುಷ್ಯರು ಹಾಕುವ ಮಂಡಕ್ಕಿ ಅನ್ನ ತಿಂದೋ, ಇಲ್ಲಾ ಹಸಿವಿನಿಂದೋ ಏಕಾಂಗಿಯಾಗಿ ಅದೇ ಸಂಪಿನಲ್ಲಿ ಹೊರ ಜಗತ್ತಿನೊಂದಿಗೆ ಸಂಪರ್ಕ ಕಡಿದುಕೊಂಡು ಜೀವಾವಧಿ ಶಿಕ್ಷೆಗೆ ಒಳಗಾಗಿವೆಯೋ ಏನೋ?

ಹೀಗೆ ನಮ್ಮನ್ನು ಬಂಧಿಸಿಡುವುದು ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ಪ್ರಕಾರ ಕಾನೂನು ಬಾಹಿರ ಎಂದು ಗೊತ್ತಿದ್ದರೂ ಸಹ ಇಂದಿಗೂ ಎಷ್ಟೋ ಸುಶಿಕ್ಷಿತರೆನಿಸಿಕೊಂಡವರೂ ನಮ್ಮನ್ನು ಬಂಧಿಸಿಟ್ಟಿದ್ದಾರೆ. ಇಂಥವರಿಗೆ ನಮ್ಮ ಸ್ಥಿತಿ ಅರಿವಾಗುವುದು ಯಾವಾಗ? ನಿಮ್ಮ ಮನೆಯ ಸಂಪಿನಲ್ಲೂ ಆಮೆಯೊಂದಿದ್ದರೆ ಈಗಿಂದೀಗಲೇ ಅದಕ್ಕೆ ಬಿಡುಗಡೆಯ ಭಾಗ್ಯ ಕೊಡಿ. ನನ್ನ ಸಾವಿಗೂ ಅರ್ಥಬಂದೀತು. ಅಂದಹಾಗೆ ದೇಶದಲ್ಲಿ 28 ಜಾತಿಯ ಸಿಹಿ ನೀರಿನ ಆಮೆಗಳ ಪೈಕಿ ಕರ್ನಾಟಕದಲ್ಲಿ 8 ಬಗೆಯ ಆಮೆಗಳು ಕಾಣಸಿಗುತ್ತವೆ ಎಂದು ಅಧ್ಯಯನಗಳು ತೋರಿಸಿವೆ. ಹೀಗೆ ಸತ್ತುಬಿದ್ದಿರುವ ನಾನು ಕಲ್ಲಾಮೆಯಾಗಿದ್ದು (**Indian pond terrapin**) ನನ್ನ ಜೀವಿತಾವಧಿ 35–40 ವರ್ಷಗಳಾಗಿವೆ.

**–ಮಹೇಶ್ವರ ಹುರುಕಡ್ಲಿ,**
**ಬಾಚಿಗೊಂಡನಹಳ್ಳಿ**

## ವರ್ಷಾವಧಿ ಜಾತ್ರೆಯ ಓಕುಳಿ ಕುಂಡ

ಉಡುಪಿಯಿಂದ ಕೇವಲ 16 ಕಿ.ಮೀ. ದೂರದಲ್ಲಿ, ಕುಂದಾಪುರದ ಕಡೆಗೆ ಹೋಗುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಟ ಎಂಬ ಊರಿದೆ. ಐದೂವರೆ ದಶಕಗಳಿಗಿಂತಲೂ ಹಿಂದೆ ನಮ್ಮ ತಂದೆ ಅಲ್ಲಿಯ ಆರೋಗ್ಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು. ಮೂರು ವರ್ಷಗಳ ಕಾಲ ನಾವು ಅಲ್ಲಿನ ಹಿರೇ ಮಹಾಲಿಂಗೇಶ್ವರ ದೇವಸ್ಥಾನದ ಅರ್ಚಕರಾಗಿದ್ದ ಪರಮೇಶ್ವರ ಅಡಿಗರ ಮನೆಯ ಎರಡು ಕೊಠಡಿಯಲ್ಲಿಯೇ ವಾಸವಾಗಿದ್ದೆವು.

ವರ್ಷಾವಧಿ ಜಾತ್ರೆ ನಡೆಯುವಾಗ ಅಲ್ಲಿ ನಡೆಯುತ್ತಿದ್ದ ಓಕುಳಿ ಆಟ ನಮಗೆಲ್ಲ ಬಹಳ ಅಚ್ಚುಮೆಚ್ಚು. ಚಿತ್ರದಲ್ಲಿ ಕಾಣುತ್ತಿರುವ ಓಕುಳಿ ಹೊಂಡಕ್ಕೆ ನೀರು ತುಂಬಿಸಿ, ಅಲ್ಲಿ ಕಾಣಿಸುವ ರಾಟೆಗೆ ಬಾಳೆಹಣ್ಣಿನ ಗೊನೆಯನ್ನು ಹಗ್ಗದ ಮುಖಾಂತರ ಕಟ್ಟಿ, ಮೇಲೆ ಕೆಳಗೆ ಎಳೆಯಲಾಗುತ್ತಿತ್ತು. ಅದನ್ನು ಹಿಡಿಯಲು ಗ್ರಾಮಗಳ ಯುವಕರು ನೀರಿಗೆ ಹಾರುವುದು ಮನರಂಜನೆಯನ್ನು ನೀಡುವುದರ ಜೊತೆಗೆ ಹಲವು ಊರುಗಳ ನಡುವೆ ಮಿತ್ರತ್ವವನ್ನೂ ಬೆಸೆಯುತ್ತಿತ್ತು. ಇತ್ತೀಚೆಗಷ್ಟೆ ನಾನು ಅಲ್ಲಿಗೆ ಭೇಟಿ ನೀಡಿದ್ದೆ. ಈಗಲೂ ಅಂತಹ ಗ್ರಾಮೀಣ ಸಂಪ್ರದಾಯವನ್ನು ಮುಂದುವರಿಸುತ್ತಾ ಬಂದಿರುವುದು ನಿಜಕ್ಕೂ ಚೇತೋಹಾರಿ.

**–ಬಿ.ಎನ್. ಭರತ್, ಬೆಂಗಳೂರು**





## ಸಮಾಧಿಗಳ ಹುಡುಕುತ್ತಾ...

ಚಿತ್ರದಲ್ಲಿ ಕಾಣುತ್ತಿರುವುದು ಪೂರ್ವಕಾಲದ ಸಮಾಧಿಗಳು. ಇವುಗಳನ್ನು ಹುಡುಕುವ ಹವ್ಯಾಸ ಬೆಳೆಸಿಕೊಂಡವರು ಸುರೇಶ್ ನ. ಕಲ್ಕೆರೆ. ಇವರು ಕುಳಿತಿರುವುದು ತಾವೇ ಹುಡುಕಿ ತೆಗೆದ ಶಿಲಾಯುಗದ ಮಾನವನ ನೆಲ ಸಮಾಧಿಯ ಹತ್ತಿರ. ಪಕ್ಕದಲ್ಲಿ ಕಾಣುತ್ತಿರುವುದು ನಿಲಸುಗಲ್ಲು ಸಮಾಧಿ. ಸುರೇಶ್ ಅವರು ವೃತ್ತಿಯಿಂದ ದೈಹಿಕ ಶಿಕ್ಷಕರು. ಪ್ರವೃತ್ತಿಯಲ್ಲಿ ಪ್ರಾಚ್ಯವಸ್ತುಗಳು, ಶಾಸನಗಳ ಸಂಶೋಧನೆ ಮಾಡುವವರು. ಈವರೆಗೆ ಅದೆಷ್ಟೋ ಶಾಸನ ಸಂಪತ್ತನ್ನು ಹುಡುಕಿ ತೆಗೆದಿರುವ ಇವರು, ಈವರೆಗೆ ದಾಖಲಾಗದ ಪ್ರಾಚೀನ ಇತಿಹಾಸ ಚರಿತ್ರೆಯತ್ತ ಬೆಳಕು ಚೆಲ್ಲುತ್ತಿದ್ದಾರೆ. ಮಕ್ಕಳಿಗೆ ತಮ್ಮ ತಮ್ಮ ಸ್ಥಳ ಮಹತ್ವದ ಅರಿವು ಮೂಡಿಸುತ್ತಿದ್ದಾರೆ. ಪ್ರಾಚೀನ ಹಗೇವುಗಳು, ವಿಗ್ರಹಗಳು, ದೇವಾಲಯಗಳ ಇತಿಹಾಸ, ಸಮಾಧಿಗಳು ಮುಂತಾದವುಗಳನ್ನು ಹುಡುಕುತ್ತ, ಅವುಗಳ ಅಧ್ಯಯನ ನಡೆಸಿ ನಿಖರ ವಿಷಯಗಳ ದಾಖಲೀಕರಣ ಮಾಡುತ್ತ ನಮ್ಮ ಹೆಜ್ಜೆಗುರುತುಗಳನ್ನು ಗುರುತಿಸುತ್ತಿದ್ದಾರೆ. ಇಂಥ ಸೇವಾ ಕಾರ್ಯಕ್ಕೆ ಸರಕಾರದ ನೆರವು ಸಿಕ್ಕರೆ ಇನ್ನಷ್ಟು ಅನುಕೂಲವಾಗುವುದು.

**–ಎಸ್.ಎನ್. ಚಂದ್ರಕಲಾ ಕೊಪ್ಪ**